ಸಾಕ್ಷಿಯನ್ನು ದಿಃ 10-12-2019 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ.ವಾಯ.ಆರ್.ಜಿ. ಪ್ರತಿವಾದಿ ಪರ ವಕೀಲರಿಂದ.

ದಿಃ15.08.1985 ರಲ್ಲಿ ನಾನು ಅಲ್ಪವಯಿ ಇದ್ದೇನು ಎಂದರೆ ಸರಿ. ಗೌರಮ್ಮ ಕೊಂ ಬಸವನ್ನೆಪ್ಪ ಹೊನ್ನಪ್ಪನವರ ಹಾಗೂ ರಾಚಯ್ಯ ಗುರುಸಂಗಯ್ಯ ವಸ್ತ್ರದ ಇವರು ನನಗೆ ವಯಕ್ತಿಕವಾಗಿ ಪರಿಚಯ ಇರುವುದಿಲ್ಲ. ದಿಃ15.08.1985 ರಲ್ಲಿ ಪ್ರಶ್ನೀತ ಮೃತ್ಯು ಪತ್ರ ತಯಾರಿಸುವ ಸಂಧರ್ಬದಲ್ಲಿ ನಾನು ಇರಲಿಲ್ಲ ಎಂದರೆ ಸರಿ ಪ್ರಶ್ನೀತ ಮೃತ್ಯು ಪತ್ರವನ್ನು ಬರೆಯಲು ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ವಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನ್ಯಾಯಾಲದಿಂದ ನನಗೆ ಜಾರಿಯಾದ ಸಾಕ್ಷಿ ಸಮನ್ಸ ನಾನು ಹಾಜರು ಪಡಿಸಿಲ್ಲ. ವಾದಿಯು ನನಗೆ, ಗೌರಮ್ಮಳ ಹೆಸರಿನಲ್ಲಿ ಒಂದು ಮೃತ್ಯು ಪತ್ರ ತಯಾರ ಆಗಿದೆ ಅದಕ್ಕೆ ನೀನು ಸಾಕ್ಷಿ ನುಡಿಯಬೇಕು ಎಂದು ಹೇಳಿದ್ದನು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿಯ ಮಾಹಿತಿಗಳನ್ನು ಊಹಿಸಿಕೊಂಡು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಪ್ರಶ್ನೀತ ಮೃತು ಪತ್ರವನ್ನು ಎಷ್ಟು ಮೌಲ್ಯದ ಚಾಪಾ ಕಾಗದದ ಮೇಲೆ ಬರೆಯಲಾಗಿದೆ ಎಂದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬಿಳಿ ಕಾಗದದ ಮೇಲೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಪ್ರಶ್ನೀತ ಮೃತ್ಯು ಪತ್ರ ಎಷ್ಟು ಪುಟಗಳಲ್ಲಿ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ.

ಸಾಮಾನ್ಯವಾಗಿ ಮೃತು ಪತ್ರವನ್ನು ಬರೆದ ನಂತರ ಅದರ ಕೆಳಗಿನ ಬಲಭಾಗದಲ್ಲಿ ಮೃತ್ಯು ಪತ್ರವನ್ನು ಬರೆದವರ ರುಜುವನ್ನು ತೆಗೆದುಕೊಳ್ಳಲಾಗುತ್ತದೆ

ಎಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಎಷ್ಟು ಆಸ್ತಿಗಳು ಇದ್ದವು ಎಂದು ಹೇಳಲು ಆಗುವುದಿಲ್ಲ. ಮೃತ್ಯು ಪತ್ರವು ಅದನ್ನು ಬರೆದುಕೊಟ್ಟವರು ಮೃತ ಪಟ್ಟ ನಂತರ ಅಸ್ತಿತ್ವಕ್ಕೆ ಬರುವಂತಹ ಕಾಗದ ಎಂದರೆ ಸರಿ. ಮೃತ್ಯು ಪತ್ರವನ್ನು ಬರೆದುಕೊಟ್ಟವರು ನಿಪಿ 1 ಕ್ಕೆ ಪ್ರತಿ ಪುಟದ ಕೆಳ ಭಾಗದಲ್ಲಿ ರುಜು ಮಾಡುತ್ತಾರೋ ಅಥವಾ ಇಲ್ಲವೋ ಎಂದು ನಾನು ನೋಡಿಲ್ಲ. ನಿಪಿ 1 ರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಿ.ಜಿ.ರೊಟ್ಟಿ ಎನ್ನುವವರು ಶ್ರೀಮಂತರು ಎಂದರೆ ಸರಿ. ಗೌರಮ್ಮಳು ಸದರಿ ಜಿ.ಜಿ.ರೊಟ್ಟಿ ಇವರ ಸಹೋದರಿ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಸದರಿ ಜಿ.ಜಿ.ರೊಟ್ಟಿ ಇವರ ಮಗ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ನ್ನು ನಾನು ಓದಿರುವುದಿಲ್ಲ. ಬಿಂಕದಕಟ್ಟಿ ಗ್ರಾಮದ ಗೋವಿಂದ ರೆಡ್ಡಿ ದೇವರೆಡ್ಡಿ ಕೋಣಿ ಮತ್ತು ಪ್ರೇಮವ್ವ ಮಾದಿನವರು, ವೆಂಕರೆಡ್ಡಿ ಹೊಸಮನಿ, ಎ.ಬಿ.ರದ್ದೆವಾಡಗಿ ಇವರ ಪರಿಚಯ ಇರುವುದಿಲ್ಲ. ನನ್ನ ವಿರುದ್ಧ ಗದಗ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಗುನ್ನಾ ನಂ.105/05 ರಲ್ಲಿ ದಾಖಲೆಗಳನ್ನು ಸೃಷ್ಟಿಸಿದ ಆಪಾದನೆಯಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಉಮೇಶ ಚವಡಿ ಮತ್ತು ಶಾರಮ್ಮ ಇವರ ಮಧ್ಯ ಆದಂತಹ ಮೃತ್ಯು ಪತ್ರದ ವ್ಯವಹಾರದಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆ.

ಜಿ.ಜಿ.ರೊಟ್ಟಿ ಮತ್ತು ನನ್ನ ತಂದೆ ಮಧ್ಯ ಸಂಬಂಧ ಚನ್ನಾಗಿ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ನ್ನು ಗಂಗಾಧರಪ್ಪ ಇವರು ನನ್ನ ತಂದೆಗೆ ಹೇಳಿ ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಸಹಿಗಳನ್ನು

ಗುರುತಿಸಲು ನಾನು ವಿಶೇಷ ಪರಿಣಿತಿಯನ್ನು ಹೊಂದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ನನ್ನ ತಂದೆಯ ಮೊಹರ ಇರುತ್ತದೆ ಎಂದು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಗದಗ